MYSORE LEGISLATIVE ASSEMBLY

SECOND DAY

Tuesday, 4th December 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Construction of Harijan Hostel Building at Hiriyur

*Q.—58. Sri V. MASIYAPPA (Hiriyur).—

Will the Government be pleased to state:

(*a*) whether foundation was laid for the Harijan hostel building near Hiriyur by the Minister for Social Welfare;

(*b*) whether the plan and estimate for the building have been sanctioned;

(*c*) if so, when they intend taking up the construction of this building and when they propose to complete the same?

A.—Smt. YASHODARA DASAPPA (Minister for Social Welfare).—

(*a*) Yes.

(*b*) No.

(*c*) Does not arise in view of answer to clause (*b*).

ಶ್ರೀ ವಿ. ಮಸಿಯಪ್ಪ.—ಈ ಕಟ್ಟಡದ ಅಸ್ತಿಭಾರ ಹಾಕಿದೆಯೆಂದು ಉತ್ತರ ಕೊಟ್ಟಿದ್ದೀರಿ. ಎಸ್ಟಿಮೇಟು ಮಂಜೂರು ಆಗಿಲ್ಲವೆಂದು ಹೇಳಿದ್ದೀರಿ. ಪ್ಲಾನು, ಎಸ್ಟಿಮೇಟು ಸಾಕ್ಷಿಕ ಮಂಜೂರು ಆಗದೇನೇ ಕಟ್ಟಡದ ಅಸ್ತಿಭಾರ ಹಾಕಿದ್ದೀರಾ? ಇದನ್ನು ಕ್ರಮ ಬದ್ಧವಾಗಿ ಮಾಡಿದ್ದೀರಾ?

†ಶ್ರೀಮತಿ ಯಶೋಧರ ದಾಸಪ್ಪ.—ಇದಕ್ಕೆ ಅಸ್ತಿಭಾರ ಹಾಕಿದ್ದು 17.2.61ರಲ್ಲಿ. ಅಲ್ಲಿ ಜಮೀನು ಇದೆ. ಅಲ್ಲಿ ಹಾಸ್ಟಲ್ ಕಟ್ಟಬೇಕೆಂದು ಕೇಳಿಕೊಂಡಿದ್ದರು. ಆಗಿದ್ದ ಮಿನಿಸ್ಟರು ಆಗಬಹುದು ಎಂದು ಹೇಳಿದ್ದರು. ಅದಕ್ಕೆ ಗವರ್ನ್‌ಮೆಂಟ್ ಆರ್ಡರ್ ಆಗಿಲ್ಲ. ಅದಕ್ಕೆ ಸುಮಾರು ರೂ. 1,10,000 ಎಸ್ಟಿಮೇಟ್ ಆಗಿತ್ತು. ಆದರೆ ಗವರ್ನ್‌ಮೆಂಟ್ ಆರ್ಡರ್ ಆಗಿರಲಿಲ್ಲ. ಅಸ್ತಿಭಾರ ಹಾಕಿದ್ದು ಉಂಟು. ಆಗಿದ್ದ ಮಂತ್ರಿಗಳು ಅಸ್ತಿಭಾರ ಹಾಕಿದರು.

ಶ್ರೀ ವಿ. ಮಸಿಯಪ್ಪ.—ಈಗಲಾದರೂ ಆದಷ್ಟು ಜಾಗ್ರತೆ ಎಸ್ಟಿಮೇಟ್ ಮಂಜೂರು ಮಾಡಿ ಕಟ್ಟಡದ ಕೆಲಸ ತೆಗೆದುಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀಮತಿ ಯಶೋಧರ ದಾಸಪ್ಪ.—ಈಗಾಗಲೇ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾಸ್ಟಲುಗಳಿಗೋಸ್ಕರ 30ಲಕ್ಷ ರೂಪಾಯಿ ಮಂಜೂರು ಮಾಡಿದೆ. ಅದರಲ್ಲಿ 18ಲಕ್ಷ ರೂಪಾಯಿ ಖರ್ಚಾಗಿ, 11ಲಕ್ಷ ರೂಪಾಯಿ ಹೊಸ ಹಾಸ್ಟಲುಗಳಿಗೆ ಉಳಿದಿರುತ್ತದೆ. ಮುಂದೆ ಬರುವ ಹಾಸ್ಟಲುಗಳನ್ನು ಗಮನದಲ್ಲಿಟ್ಟುಕೊಂಡಿರುತ್ತೇವೆ.

Sri G. DUGGAPPA.—May I know whether the Government would take up this hostel?

ಶ್ರೀಮತಿ ಯಶೋಧರ ದಾಸಪ್ಪ.—ಮುಂದೆ ಕಟ್ಟಡ ಕೆಲಸ ತೆಗೆದುಕೊಂಡಾಗ, ಈ ಹಾಸ್ಟಲನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ದೇವಣ್ಣ ಸಿದ್ದಪ್ಪ.—ಸ್ಯಾಂಕ್ಷನ್ ಆಗದೇನೇ ಮೆಟ್ರಿಕೂಲು ಸಂಸ್ಥಾನದಲ್ಲಿ ಎಷ್ಟು ಕಡೆ ಫೌಂಡೇಷನ್ ಸ್ಟೋನ್ ಹಾಕಿದ್ದೀರಿ?

ಶ್ರೀಮತಿ ಯಶೋಧರ ದಾಸಪ್ಪ.—ಅದು ನಮ್ಮ ಗಮನಕ್ಕೆ ಬಂದಿಲ್ಲ.

†Indicates that the remarks or speeches have not been revised by the member concerned.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನ್ಯಾಂಕ್ಷನ್ ಇಲ್ಲ ದೇನೇ ಯಾವ ತಾರೀಖಿನಲ್ಲಿ, ಯಾವ ಇಸವಿಯಲ್ಲಿ ಅಸ್ತಿಭಾರ ಹಾಕಿದಿರಿ?

Mr. SPEAKER.—Does it arise out of this question?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಯಾರದೋ ಜಮೀನಿನಲ್ಲಿ ಅಸ್ತಿಭಾರ ಹಾಕಿದ್ದೇವೆಂದರೆ ಏನು ಅರ್ಥ?

Mr. SPEAKER.—It is a very good reasoning but pointless in this connection.

ಶ್ರೀಮತಿ ಯಶೋಧರ ದಾಸಪ್ಪ.—ಯಾರದೋ ಜಮೀನಲ್ಲ. ಆದಿ ಜಾಂಬವರಿಗೆ 9 ಎಕರೆ ಜಮೀನು ಸೇರಿದೆ. ಅವರ ಜನ ಹೆಚ್ಚು ಸಂಖ್ಯೆಯಲ್ಲಿರುವುದರಿಂದ ಹರಿಯೂರಿನಲ್ಲಿ ಒಂದು ಹಾಸ್ಟಲ್ ಆಗಬೇಕು ಎಂದು ಸರ್ಕಾರದ ಗಮನಕ್ಕೆ ತಂದರು. ಹೊಸದಾಗಿ ಕಟ್ಟಡಗಳನ್ನು ತೆಗೆದುಕೊಂಡಾಗ, ಇದನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಜಿ. ವಿ. ಗೌಡ.—3ನೇ ಪಂಡವಾರ್ಷಿಕ ಯೋಜನೆಯಲ್ಲಿ 30 ಲಕ್ಷ ರೂಪಾಯಿ ಮಂಜೂರು ಮಾಡಿದೆ ಎಂದು ಹೇಳಿದಿರಿ. 4ನೇ ವರ್ಷಕ್ಕೆ, 5ನೇ ವರ್ಷಕ್ಕೆ ಹಾಸ್ಟಲಗಾಗಿ ಉಳಿದಿರುವ ಹಣವೆಷ್ಟು?

ಶ್ರೀಮತಿ ಯಶೋಧರ ದಾಸಪ್ಪ.—11ಲಕ್ಷ ರೂಪಾಯಿ.

ಶ್ರೀ ಬಿ. ಎಸ್. ಗೌಡ.—ಹಣ ಇಲ್ಲದೇನೇ ಅಸ್ತಿಭಾರ ಹಾಕುವ ಅವಶ್ಯಕತೆ ಏನಿತ್ತು?

Mr SPEAKER.—You are repeting the same question.

ಶ್ರೀಮತಿ ಯಶೋಧರ ದಾಸಪ್ಪ.—1957ನೇ ಇಸವಿಯಲ್ಲಿ ಈ ಕೋಮಿನವರು ಹಾಸ್ಟಲ್ ಕಟ್ಟಡ ಬೇಕೆಂದು ಎಜುಕೇಶನ್ ಡಿಪಾರ್ಟ್‌ಮೆಂಟಿನವರನ್ನು ಕೇಳಿದರು. ಅವರು ಅಲ್ಲಿ ಕಮ್ಯೂನಲ್ ಹಾಸ್ಟಲ್ ಕೊಡುವುದಿಲ್ಲವೆಂದು ಹೇಳಿದರು. ಆಮೇಲೆ ನೋಡಿಯಲ್ ವೆಲ್‌ಫೇರ್ ಖಾತೆಯನ್ನು ಕೇಳಿಕೊಂಡದ್ದರಲ್ಲಿ, ನೋಡಿಯಲ್ ವೆಲ್‌ಫೇರ್ ಬೋರ್ಡ್ ಕೊಡಬೇಕೆಂದು ಒಪ್ಪಿತು. ಆಗಿನ ಮಿನಿಸ್ಟರು ಆಗಬೇಕು ಎಂದು ಹೇಳಿದ್ದು ಉಂಟು.

ಶ್ರೀ ಬಿ. ಎಸ್. ಗೌಡ.—ಹೊಸದಾಗಿ ಕಟ್ಟಡಗಳಿಗೆ ನ್ಯಾಂಕ್ಷನ್ ಕೊಡುವಾಗ, ಹಿಂದೆ ಅಸ್ತಿಭಾರ ಹಾಕಿದವುಗಳಿಗೆ ಪ್ರಯಾರಿಟಿ ಕೊಡುತ್ತೀರಾ?

ಶ್ರೀಮತಿ ಯಶೋಧರ ದಾಸಪ್ಪ.—ಈಗಾಗಲೇ ಮುಖ್ಯ ಮುಖ್ಯ ಪಟ್ಟಣಗಳಾದಂಥ ಬೆಂಗಳೂರು, ಮಂಗಳೂರು, ಶಿವಮೊಗ್ಗ, ಕಾರವಾರದಲ್ಲಿ ಹಾಸ್ಟಲುಗಳಿಲ್ಲ. ಈ ನಾಲ್ಕು ಜಾಗಗಳನ್ನು ಗಮನಕ್ಕೆ ತೆಗೆದು ಕೊಂಡು ಉಳಿದ ಕಡೆ ಮಾಡಿ ಕೊಡಬೇಕು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಎಸ್ಟಿಮೇಟು ಇಲ್ಲದೆ, ದುಡ್ಡು ಇಲ್ಲದೆ, ಫೌಂಡೇಷನ್ ಹಾಕುವ ಅವಶ್ಯಕತೆ ಏನಿತ್ತು?

ಶ್ರೀಮತಿ ಯಶೋಧರ ದಾಸಪ್ಪ.—1961ನೇ ಇಸವಿ ಫೆಬ್ರವರಿ ತಿಂಗಳೊಳಗೆ ಫೌಂಡೇಶನ್ ಹಾಕಿದ್ದಾರೆ, ಹಾಕಿ ಇನ್ನೂ ಒಂದು ವರ್ಷ ಆಗಿದೆ: 1,10,000 ರೂಪಾಯಿಗಳಿಗೆ ಆ ಕಟ್ಟಡಕ್ಕೆ ಒಂದು ಎಸ್ಟಿಮೇಟು ಬಂದಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ದುಡ್ಡು ಇಲ್ಲದೆ, ಎಸ್ಟಿಮೇಟು ನ್ಯಾಂಕ್ಷನ್ ಆಗದೆ ಹಾಸ್ಟಲುಗಳಿಗೆ ಫೌಂಡೇಷನ್ ಹಾಕುವ ಉದ್ದೇಶವೇನು?

ಶ್ರೀಮತಿ ಯಶೋಧರ ದಾಸಪ್ಪ.—ಇರಾಖೆಯಲ್ಲಿ ದುಡ್ಡಿದೆ. ಹಾಸ್ಟಲುಗಳಿಗೋಸ್ಕರ 3ನೇ ಪ್ಲಾನಿನಲ್ಲಿ 30 ಲಕ್ಷ ರೂಪಾಯಿ ಇಟ್ಟಿದೆ. ಈ ಜಾಗದಲ್ಲಿ ಆ ಕೋಮಿನ ಜನಸಂಖ್ಯೆ ಜಾಸ್ತಿ ಇರುವುದರಿಂದ, ಆಗಿನ ಮಂತ್ರಿಗಳಿಗೆ ಹಾಸ್ಟಲ್ ಬೇಕು ಎನ್ನಿಸಿತು; ಅವರು ಮಾತನ್ನು ಕೊಟ್ಟಿದ್ದಾರೆ. ಅದನ್ನು ನಡೆಸಲೇಬೇಕು.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಮುಖ್ಯ ಮಂತ್ರಿಗಳು ಇನ್ನುಮುಂದೆ ಕಟ್ಟಡಗಳನ್ನು ಕಟ್ಟುವುದಿಲ್ಲ ಅನ್ನುವ ರೀತಿಯಲ್ಲಿ ಅಶ್ವಾಸನೆ ಕೊಡಿಸಿದ್ದಾರೆ. ಈ ಹರಿಜನರ ಹಾಸ್ಟಲುಗಳಿಗೆ ಆ ಮಾತು ಅನ್ವಯಿಸುತ್ತದೆಯೋ ಇಲ್ಲವೋ!

ಶ್ರೀಮತಿ ಯಶೋಧರ ದಾಸಪ್ಪ.—ಈ ಖಾತೆಯೊಳಗೆ ಇರುವ ಹಣದಲ್ಲಯೇ ಹಿಂದುಳಿದ ಪಂಗಡಗಳವರ ಹಾಸ್ಟಲು ಕಟ್ಟಡಗಳನ್ನು ತೆಗೆದು ಕೊಂಡು ಮಾಡಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಊರಿನಲ್ಲಿ ಯಾವ ಯಾವ ಕೋಮಿನ ಹಾಸ್ಟಲುಗಳಿವೆ?

ಶ್ರೀಮತಿ ಯಶೋಧರ ದಾಸಪ್ಪ.—ಗೊತ್ತಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಪ್ರತಿಯೊಂದು ಜಾತಿಗೂ ಹಾಸ್ಟಲ್ ಕೊಡುವುದು ಸರ್ಕಾರದ ನೀತಿಯೇ?

ಶ್ರೀಮತಿ ಯಶೋಧರ ದಾಸಪ್ಪ.—ಎಲ್ಲೆಲ್ಲಿ ಹರಿಜನರ ಜನಸಂಖ್ಯೆ ಹೆಚ್ಚಾಗಿರುತ್ತದೆಯೋ, ಅಲ್ಲಿ ಹಿಂದುಳಿದ ಪಂಗಡಗಳವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವುದು ಸರ್ಕಾರದ ಉದ್ದೇಶ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಒಂದೊಂದು ಊರಿನಲ್ಲಿಯೂ ಆದಿಜಾಂಬವ ಹಾಸ್ಟಲು, ಇನ್ನೊಂದು ಜಾತಿಯ ಹಾಸ್ಟಲು, ಹೀಗೆ 15ತರಹ ಜಾತಿಗಳಿದ್ದರೆ, 15 ಹಾಸ್ಟಲುಗಳನ್ನು ಕಟ್ಟುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಎಡಗೈ, ಬಲಗೈ ಜನ ಎಂದು ಇದ್ದಾರೆ. ಎಲ್ಲಾ ಒಂದು ಜಾತಿ ಹೆಸರಿನ ಮೇಲೆ ಹಾಸ್ಟಲ್ ಕಟ್ಟುವುದು ಸರ್ಕಾರದ ಉದ್ದೇಶವೇ?

ಶ್ರೀಮತಿ ಯಶೋಧರ ದಾಸಪ್ಪ.—ಇನ್ನು ಮೇಲೆ ಜನರಲ್ ಹಾಸ್ಟಲ್ ಕಟ್ಟಬೇಕೆಂಬುದು ಸರ್ಕಾರದ ಉದ್ದೇಶ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮತ್ತೆ ಇಂಥ ಹಾಸ್ಟಲುಗಳಿಗೆ ಫೌಂಡೇಷನ್ ಸ್ಟೋನ್ ಹಾಕುವ ಉದ್ದೇಶವಾದರೂ ಏನು?

ಶ್ರೀಮತಿ ಯಶೋಧರ ದಾಸಪ್ಪ.—ಹಾಗಿದ್ದರೂ ಕೂಡ ಅಲ್ಲ ಬೇರೆ ಕೋಮಿನವರನ್ನು ಸೇರಿಸಿಕೊಳ್ಳುವಂತೆ ಇನ್ನುಮುಂದೆ ನೋಡಿಕೊಳ್ಳುತ್ತೇವೆ. ಹಿಂದುಳಿದ ಪಂಗಡಗಳವರಿಗೆ ಮೊದಲು ಸಹಾಯ ಮಾಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಹರಿಯೂರಿನಲ್ಲಿ ಹರಿಜನರ ಸಂಖ್ಯೆ ಎಷ್ಟಿದೆ?

ಶ್ರೀಮತಿ ಯಶೋಧರ ದಾಸಪ್ಪ.—ಹೆಚ್ಚಾಗಿ ಇದೆ. ಸುಮಾರು ಇಪ್ಪತ್ತು ಸಾವಿರ ಇರಬಹುದು.